ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ಪ್ರಶ್ನೆ: ಆನ್‌ಲೈನ್ ಬೆಟ್ಟಿಂಗ್ ಆಪ್‌ಗಳಿಂದ ಆಗುತ್ತಿರುವ ಅನಾನುಕೂಲಗಳು, ಯುವಕರ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮ, ಮುಂದಾಗಬಹುದಾದ ಅಪಾಯಕಾರಿ ಬೆಳವಣಿಗೆ ಹಾಗೂ ಇದನ್ನು ನಿಯಂತ್ರಿಸುವ ಕುರಿತು.

******

ಉತ್ತರ:

- ಆನ್‌ಲೈನ್ ಬೆಟ್ಟಿಂಗ್ ಹಾಗೂ ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್ ಸಂಬಂಧಿಸಿದಂತೆ ಗುಪ್ತ ಮಾಹಿತಿ ಸಂಗ್ರಹಿಸಿ, ಮಾಹಿತಿ ದೊರೆತಲ್ಲಿ ಪ್ರಕರಣ ದಾಖಲಿಸಿ ಅಂತಹ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿರುತ್ತದೆ. ಇಲ್ಲಿಯವರೆಗೆ ರಾಜ್ಯದ್ಯಾಂತ ಒಟ್ಟು 379 ಪ್ರಕರಣಗಳು ದಾಖಲಾಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-ಅ ರಲ್ಲಿ ನೀಡಲಾಗಿದೆ)
- ಇಂತಹ ಜೂಜು ನಡೆಸುತ್ತಿರುವವರ ಮೇಲೆ ಸೂಕ್ಷ್ಮ ನಿಗಾವಹಿಸಿ ಕಾನೂನು ಪ್ರಕಾರ ಪ್ರಕರಣಗಳನ್ನು ದಾಖಲಿಸಿ ನಿರ್ದಾಕ್ಷಿಣ್ಯ ಕ್ರಮ ಕೈಕೊಂಡು ನ್ಯಾಯಾಲಯದ ವಿಚಾರಣೆಗೆ ಒಳಪಡಿಸಲಾಗುವುದು.
- ಪದೇ ಪದೇ ಇಂತಹ ದಂಧೆಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಆರೋಪಿತರ ವಿರುದ್ಧ ಗಡಿಪಾರು ಹಾಗೂ ಗೂಂಡಾ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಈ ಬಗ್ಗೆ ಜಿಲ್ಲೆಯ ಎಲ್ಲಾ ಠಾಣಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡಿ ಸೂಕ್ತ ಕಾನೂನಿನ ಅಡಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.
- ಇಂತಹ ಜೂಜಾಟಗಳನ್ನು ತಡೆಗಟ್ಟಲು ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ತಮ್ಮ ವ್ಯಾಪ್ತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
- ಇಂತಹ ಚಟುವಟಿಕೆಗಳು ಕಂಡು ಬಂದಲ್ಲಿ ಕೂಡಲೇ ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದ್ದು, ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಪಾಲನೆ ಮಾಡುತ್ತಿರುತ್ತಾರೆ.
- ರಾಜ್ಯದಲ್ಲಿ ಇಂತಹ ಕಾನೂನುಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಂಖ್ಯೆ : ಒಇ 706 ಎಸ್ ಎಸ್ ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ-ಅ

| ಕ್ರ.ಸ | ಘಟಕದ ಹೆಸರು | ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 172 |
| 2. | ಮೈಸೂರು ನಗರ | 7 |
| 3. | ಹುಬ್ಬಳ್ಳಿ-ಧಾರವಾಡ ನಗರ | 0 |
| 4. | ಮಂಗಳೂರು ನಗರ | 17 |
| 5. | ಬೆಳಗಾವಿ ನಗರ | 0 |
| 6. | ಕಲಬುರಗಿ ನಗರ | 0 |
| 7. | ಬೆಂಗಳೂರು ಜಿಲ್ಲೆ | 18 |
| 8. | ತುಮಕೂರು ಜಿಲ್ಲೆ | 5 |
| 9. | ಕೋಲಾರ ಜಿಲ್ಲೆ | 14 |
| 10. | ರಾಮನಗರ ಜಿಲ್ಲೆ | 20 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 22 |
| 12. | ಕೆ.ಜಿ.ಎಫ್ ಜಿಲ್ಲೆ | 11 |
| 13. | ಮೈಸೂರು ಜಿಲ್ಲೆ | 0 |
| 14. | ಮಂಡ್ಯ ಜಿಲ್ಲೆ | 0 |
| 15. | ಹಾಸನ ಜಿಲ್ಲೆ | 0 |
| 16. | ಕೊಡಗು ಜಿಲ್ಲೆ | 1 |
| 17. | ಚಾಮರಾಜನಗರ ಜಿಲ್ಲೆ | 0 |
| 18. | ಬೆಳಗಾವಿ ಜಿಲ್ಲೆ | 21 |
| 19. | ವಿಜಯಪುರ ಜಿಲ್ಲೆ | 4 |
| 20. | ಧಾರವಾಡ ಜಿಲ್ಲೆ | 0 |
| 21. | ಬಾಗಲಕೋಟೆ ಜಿಲ್ಲೆ | 11 |
| 22. | ಗದಗ ಜಿಲ್ಲೆ | 43 |
| 23. | ಚಿತ್ರದುರ್ಗ ಜಿಲ್ಲೆ | 1 |
| 24. | ಹಾವೇರಿ ಜಿಲ್ಲೆ | 0 |
| 25. | ಶಿವಮೊಗ್ಗ ಜಿಲ್ಲೆ | 1 |
| 26. | ದಾವಣಗೆರೆ ಜಿಲ್ಲೆ | 0 |
| 27. | ದಕ್ಷಿಣ ಕನ್ನಡ ಜಿಲ್ಲೆ | 1 |
| 28. | ಉತ್ತರ ಕನ್ನಡ ಜಿಲ್ಲೆ | 1 |
| 29. | ಚಿಕ್ಕಮಗಳೂರು ಜಿಲ್ಲೆ | 0 |
| 30. | ಉಡುಪಿ ಜಿಲ್ಲೆ | 0 |
| 31. | ಬಳ್ಳಾರಿ ಜಿಲ್ಲೆ | 4 |
| 32. | ಕಲಬುರಗಿ ಜಿಲ್ಲೆ | 0 |
| 33. | ಬೀದರ್ ಜಿಲ್ಲೆ | 5 |
| 34. | ರಾಯಚೂರು ಜಿಲ್ಲೆ | 0 |
| 35. | ಕೊಪ್ಪಳ ಜಿಲ್ಲೆ | 0 |
| 36. | ಯಾದಗಿರಿ ಜಿಲ್ಲೆ | 0 |
| 37. | ವಿಜಯನಗರ ಜಿಲ್ಲೆ | 0 |
| | ಒಟ್ಟು | 379 |